ಓ. ಎಸ್ .   26/2016                                    ಡಿ.ಡಬ್ಲ್ಯೂ - 6   ಚಿದಾನಂದ ದರಬಾರೆ

( ದಿನಾಂಕ 06-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಪಾಟಿ ಸವಾಲು : ವಾದಿ ಪರ ಶ್ರೀ   ಕೆ ಬಿ ಕೆ ವಕೀಲರಿಂದ  -</u>**

ವಾದಿ ಹಾಜರ ಮಾಡಿದ  ಕಾಗದ ಪತ್ರಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಪ್ರತಿವಾದಿಯರು ಏನು ತಕರಾರು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಸಿ ಟಿ ಎಸ್ ನಂ. 4335 ಮತ್ತು 4335ಎ  ಪ್ಲಾಟಗಳನ್ನು ಖರೀದಿ ಮಾಡಿದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಈ ಎರಡೂ ಸಿ ಟಿ ಎಸ್ ಗಳನ್ನು ಖರೀದಿ ಮಾಡಿದ್ದಾರೆ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸಿ ಟಿ ಎಸ್ ನಂ. 4335 ರಲ್ಲಿ 47 ರಿಂದ 61 ರ ವರೆಗೆ ಪ್ಲಾಟಗಳನ್ನು ಮಾಡಿದ್ದಾರೆ. 30 ಗುಂಟೆಯಲ್ಲಿ ಪ್ರತಿವಾದಿಯರು ಪ್ಲಾಟಗಳನ್ನು ಖರೀದಿ ಮಾಡಿ ಮನೆ ಕಟ್ಟಿದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಶರೀಫಾ ನದಾಫ ಇವರು ದಾವೆ ಮಾಡುವ ಪೂರ್ವದಲ್ಲಿ ಎ ಡಿ ಎಲ್ ಆರ್ ಇವರಿಗೆ ಅಳತೆ ಮಾಡಲು ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಎ ಡಿ ಎಲ್ ಆರ್ ಅಲ್ಲಿ ಬಂದು ಸರ್ವೆ ಮಾಡಿ ಪಿಟಿ ಶೀಟ ತಯಾರಿಸಿದ್ದಾರೆ ಎಂದರೆ ನಿಜ. ನಾನು ಮತ್ತು ಉಳಿದ ಪ್ರತಿವಾದಿಗಳು  ಆ ಪಿಟಿ ಶೀಟ ತಪ್ಪು ಮಾಡಿದ್ದಾರೆ ಎಂದು ಅಪೀಲ ಸಲ್ಲಿಸಿರುತ್ತೇವೆ. ಡಿ ಡಿ ಎಲ್ ಆರ್ ಗೆ ಅಪೀಲ ಸಲ್ಲಿಸಿದ ಕಾಗದ ಪತ್ರಗಳನ್ನು ನಮ್ಮ ವಕಿವೀಲರು ಸಲ್ಲಿಸಿರುತ್ತಾರೆ. ನಾನು ಪ್ರತ್ಯೇಕವಾಗಿ ಅಪೀಲ ಮಾಡಿಲ್ಲ , ಎಲ್ಲರೂ ಕೂಡಿ ಅಪೀಲ ಮಾಡಿದ್ದೇವೆ. ಈಗಲೂ ಆ 30 ಗುಂಟೆ  ಶರೀಫಾ ನದಾಫ ಇವರ ಕಬ್ಜಾದಲ್ಲಿ ಇದೆ ಅವರೇ ವಹಿವಾಟ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅಲ್ಲಿ ನಮ್ಮ ಪ್ಲಾಟಗಳು ಇವೆ ಮತ್ತು ನಮ್ಮ ಮನೆಗಳು ಇವೆ ಎಂದು ಹಾಗೂ ಅವುಗಳು ಉಳಿಯಬೇಕು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಕೋರ್ಟ ಮೂಲಕ ಮತ್ತೊಮ್ಮೆ ಸರ್ವೆ ಮಾಡಲು ನನ್ನ ತಕರಾರು ಇರುವುದಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)

ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ